

ತಾಯಿ ಕಾಗೆ ಹಾರಿ ಬಂತು. 'ಮಗು ಜೀವನದಲ್ಲಿ ನಮಗೆ ಎಲ್ಲಿ ಮರ್ಯಾದೆ ಇಲ್ಲವೋ ಅಲ್ಲಿಗೆ ಹೋಗಬಾರದು ಬಂಗಾರ...! ನೋಡು ಅವರೇ ನಮ್ಮ ಹತ್ತಿರ ಬರುವಂತೆ ನಾವೇ ಬೆಳೆದು ತೋರಿಸಬೇಕು' ಎಂದಿತು. ಅಮ್ಮನ ಮಾತಿಗೆ ಕಾಗೆ ಮರಿ ಕಾಜೂ ಗೋಣಾಡಿಸಿತು.

ಇದಾಗಿ ಕೆಲವು ದಿನಗಳು ಕಳೆದಿತ್ತು. ಮರಿ ಹದ್ದಿಗೆ ಮಾತ್ರ ಕಾಗೆಯ ಮರಿಯ ಗೆಳೆತನ ಬಿಡಲಾಗುತ್ತಿಲ್ಲ, ಮತ್ತೆ ಹೊರಗೆ ಬರುವುದು, ಕಾಗೆಯೊಂದಿಗೆ ಆಡುವುದು ಮಾಡತೊಡಗಿತು. ಅಮ್ಮ ಬರುವ ಹೊತ್ತಾಯಿತೆಂದರೆ ಮತ್ತೆ ಗೂಡೊಳಗೆ ಸೇರುತ್ತಿತ್ತು.

ಅಂದು ಬಿಸಿಲು ಬಹಳವಿತ್ತು. ಆಹಾರ ಹುಡುಕಿ ತಾಯಿ ಹದ್ದು ಹಾರಿ ಬರುತ್ತಿತ್ತು, ಹದ್ದು ಮರಿಯನ್ನು ಕಾಗೆ ಎಳೆದುಕೊಂಡು ಒಯ್ಯುತ್ತಿದೆ. ಶಕ್ತಿಯೇ ಇಲ್ಲದಂತೆ ಮರಿ ಹದ್ದು ನರಳುತ್ತಿದೆ, ಓ ಕರೀ ಕಾಗೇ ತನ್ನ ಮರಿಯೊಂದಿಗೆ ಆಡಬೇಡಾ ಎಂದುದಕ್ಕೆ ಸೇಡು ತೀರಿಸಿಕೊಳ್ಳಲು ಬಂದಿದೆ ಎಂದು ತಿಳಿದು, ನನ್ನ ಮರಿಯನ್ನು ಎತ್ತಿ ಒಯ್ಯುತ್ತಿದ್ದೀಯಾ..!. ಇರು ಮಾಡುವೆ ಎಂದು ಹಾರಿ ಕಾಗೆಯ ತಲೆಗೆ ಕುಕ್ಕಿ ಗಾಯ ಮಾಡತೊಡಗಿತು, ನಂತರ ನನ್ನ ಮರಿಯನ್ನು ಬಿಡು ಕರಿ ಕಾಗೆಯೇ! ನಿನ್ನ ಗುಣ ತೋರಿಸಿದೆಯಲ್ಲಾ! ಎಂದು ಚೀರಿ ತನ್ನ ಗೂಡಿನತ್ತ ನೋಡಿತು. ಅಚ್ಚರಿ. ಇಡೀ ಮರವೇ ಹೊತ್ತಿ ಉರಿಯುತ್ತಿದೆ. ಎರಡೂ ಗೂಡುಗಳಿಗೂ ಬೆಂಕಿ ಆವರಿಸಿದೆ. ರೆಕ್ಕೆಗಳು ಸುಟ್ಟಿದ್ದ ತನ್ನ ಕಾಗೆ ಮರಿಯನ್ನು ಲೆಕ್ಕಿಸುತ್ತಿಲ್ಲ. ಕಾಗೆಯು ಹದ್ದಿನ ಮರಿಯನ್ನು ಕೆಳಗಿಳಿಸಿ ಸುಡುವ ಗೂಡಿಂದ ರಕ್ಷಿಸಿದೆ. ತಕ್ಷಣ ಅರ್ಥ ಮಾಡಿಕೊಂಡ ಹದ್ದಿಗೆ ನಾಚಿಕೆಯಾಯಿತು.



ಹದ್ದು ಮರಿಯೊಂದಿಗೆ ಆಡಬೇಡಾ ಎಂದು ಕಾಲು ಮುರಿಯುವಂತೆ ಕಾಗೆ ಮರಿಯನ್ನು ಹೊಡೆದು ಕಳಿಸಿದ್ದೆ. ಆದರೆ ಕಾಗೆ ಮಾತ್ರ ತನ್ನ ಮರಿಯನ್ನು ಬೆಂಕಿಯಿಂದ ರಕ್ಷಿಸಿದೆ. ಕಾಗೆಯದು ಕರುಣೆಯ ಗುಣ. ಕರಿಯೆಂದು ಹೀಯಾಳಿಸಿದರೂ, ಕಾಗೆ ತನ್ನ ಗುಣ ಕರಿಯಲ್ಲ ಎಂದು ತೋರಿಸಿತಲ್ಲ. ಕಾಗೆ ಇಲ್ಲದಿದ್ದರೆ ತನ್ನ ಮರಿ ಸತ್ತು ಹೋಗುತ್ತಿತ್ತಲ್ಲಾ...! ಎಂದು ಪೇಚಾಡಿತು, ತನ್ನ ಸುಟ್ಟ ಗರಿಯನ್ನೂ ಲೆಕ್ಕಿಸದೇ ಕಾಗೆಯು ಹದ್ದು ಮರಿಯನ್ನು ಜೋಪಾನ ಮಾಡಿತ್ತು. ಕಾಗೆಯ ಹತ್ತಿರ ಬಂದು ಹದ್ದು, 'ಕಾಗೇ ಅಕ್ಕಾ! ನಾ ಕರಿಯಳೆಂದು ಹಿಂಜರಿಯಬೇಡಾ ಬಿಳಿ ಗೆಳತಿ ಎಂದ ಕವಿ ಕವಿವಾಣಿಯನ್ನು ನಿಜ ಮಾಡಿದೆ. ಕ್ಷಮಿಸು' ಎಂದಿತು.

'ನಾವಿಬ್ಬರೂ ಇನ್ನು ಸ್ನೇಹಿತರು. ನಮಗೇಕೆ ಬಣ್ಣದ ಗೊಡವೆ? ಬಿಳಿಯಾದರೇನು, ಕರಿಯಾದರೇನು ನಾವೆಲ್ಲಾ ಪಕ್ಷಿಗಳು. ಒಂದಾಗಿ ಬಾಳೋಣ. ನಮ್ಮ ಮಕ್ಕಳೆಲ್ಲಾ ತಾರತಮ್ಯ ಮರೆಯಲಿ. ರೂಪ, ಬಣ್ಣ, ಮರೆತು ಒಂದಾಗಿ ಆಡಲಿ. ಕೂಡುಣ್ಣಲಿ, ಕೂಡಿರಲಿ' ಎಂದು ಕಾಗೆಯನ್ನು ತಬ್ಬಿಕೊಂಡಿತು. ಬಿಳಿಹದ್ದಿನ ತೆಕ್ಕೆಗೆ ಕರಿಕಾಗೆ ಮರಿಯೂ ಬಿಳಿಹದ್ದಿನ ಮರಿಯೂ ಬಂದು ಅಪ್ಪಿಕೊಂಡವು. ಬನ್ನಿ, ಒಂದೇ ಗೂಡು ಕಟ್ಟಿ ಒಂದಾಗಿ ಇರೋಣ ಎಂದಿತು ಬಿಳಿ ಹದ್ದು. ಒಂದೇ ಗೂಡು ಅಂದದ್ದೇ ತಡ ಚುಮು ಹದ್ದಿನ ಮರಿಯೂ ಕಾಜೂ ಕಾಗೆ ಮರಿಯೂ ಖುಷಿಯಿಂದ ಚಪ್ಪಾಳೆ ತಟ್ಟಿದವು.

●

